# ಕುವೆಂಪು ವಿಶ್ವವಿದ್ಯಾಲಯ

## ನಿರ್ದೇಶಕರ ಕಾಯಾಲಯ,

## ದೂರ ಶಿಕ್ಷಣ ನಿರ್ದೇಶನಾಲಯ

ಜ್ಞಾನಸಹ್ಯಾದ್ರಿ ಶಂಕರಘಟ್ಟ–577451, ಶಿವಮೊಗ್ಗ ಜಿಲ್ಲೆ, ಕರ್ನಾಟಕ

ದೂರವಾಣಿ–08282–256450, ಫ್ಯಾಕ್ಸ್: 256370, ಇ–ಮೇಲ್: info@kuvempuuniversitydde.org

ಸಂಖ್ಯೆ:ಕುವಿ/ದೂಶಿನಿ–2/2017–18/2025 ದಿನಾಂಕ: 04.01.2018

**ಸು ತ್ತೋ ಲೆ**

ವಿಷಯ:– 2017–18 ನೇ ಸಾಲಿನ ಎಂ.ಬಿ.ಎ. ಸಂಪರ್ಕ ತರಗತಿಗಳನ್ನು ನಡೆಸುವ ಕುರಿತು.

–೦–

ದೂರ ಶಿಕ್ಷಣ ನಿರ್ದೇಶನಾಲಯದ ಎಂ.ಬಿ.ಎ. ಪದವಿಗೆ ಮಾನ್ಯತೆ ಪಡೆದ ಅಧ್ಯಯನ ಕೇಂದ್ರಗಳಲ್ಲಿ 2017–18 ನೇ ಸಾಲಿಗೆ ಸಂಪರ್ಕ ತರಗತಿಗಳನ್ನು ನಡೆಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸಿ ಸಂಪರ್ಕ ತರಗತಿಗಳನ್ನು ಯಶಸ್ವಿಯಾಗಿ ನಿರ್ವಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

**<u>ಸೂಚನೆಗಳು</u> :**

1. ಮಾನ್ಯತೆ ಪಡೆದ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳು ತಮ್ಮ ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆದ ಎಂ.ಬಿ.ಎ. ದ್ವಿತೀಯ ಮತ್ತು ತೃತೀಯ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶ ಅರ್ಜಿಗಳನ್ನು ದಿನಾಂಕ 10.01.2018 ರ ಒಳಗಾಗಿ ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಿ, ವಿಶ್ವವಿದ್ಯಾಲಯದಿಂದ ಪ್ರವೇಶಾನುಮೋದನೆ ಪಡೆಯುವುದು. ಪ್ರವೇಶಾನುಮೋದನೆ ಪಡೆದ ನಂತರ ದಿನಾಂಕ 31.01.2018 ರ ಒಳಗಾಗಿ ಸಂಪರ್ಕ ತರಗತಿಗಳನ್ನು ಕ್ರಮಬದ್ಧವಾಗಿ ನಡೆಸಿ ಹಾಜರಾತಿ ಅಂಕಗಳು ಹಾಗೂ ಆಂತರಿಕ ಸಂಕ್ಷಿಪ್ತ ಸಾರಲೇಖ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಅಂಕಗಳನ್ನು ಪ್ರತ್ಯೇಕವಾಗಿ ಆನ್‌ಲೈನ್ ಮೂಲಕ ಕುಲಸಚಿವ (ಪರೀಕ್ಷಾಂಗ) ರವರ ಕಛೇರಿಗೆ ಸಲ್ಲಿಸುವುದು. ಫೆಬ್ರವರಿ 2018 ರ ಮಾಹೆಯಲ್ಲಿ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಬೇಕಾಗಿರುವುದರಿಂದ ಯಾವುದೆ ಕಾರಣಕ್ಕೂ ಮೇಲ್ಕಂಡ ದಿನಾಂಕವನ್ನು ವಿಸ್ತರಿಸಲಾಗುವುದಿಲ್ಲ.

2. ಪ್ರವೇಶಾನುಮೋದನೆ ಪಡೆದ ವಿದ್ಯಾರ್ಥಿಗಳು ಮಾತ್ರ ಸಂಪರ್ಕ ತರಗತಿಗಳಿಗೆ ಹಾಜರಾಗುವುದು. ಪುನರಾವರ್ತಿತ ವಿದ್ಯಾರ್ಥಿಗಳು ಸಂಪರ್ಕ ತರಗತಿಗಳಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

3. ಅನುಮೋದಿತ ಪ್ರತಿ ಅಧ್ಯಯನ ಕೇಂದ್ರಗಳು ಸಂಪರ್ಕ ತರಗತಿ ನಡೆಸುವ ವೇಳಾಪಟ್ಟಿಯನ್ನು ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಿ ಅನುಮೋದನೆ ಪಡೆದ ನಂತರವೇ ಸಂಪರ್ಕ ತರಗತಿಗಳನ್ನು ನಡೆಸುವುದು. ಅನುಮೋದನೆ ಪಡೆಯದೆ ಸಂಪರ್ಕ ತರಗತಿಗಳನ್ನು ನಡೆಸಿದಲ್ಲಿ ಅಂತಹ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳು ಸಂಪರ್ಕ ತರಗತಿಗಳನ್ನು ನಡೆಸಿರುವುದಿಲ್ಲವೆಂದೇ ಭಾವಿಸಲಾಗುವುದು. ಸಂಪರ್ಕ ತರಗತಿ ವೇಳಾಪಟ್ಟಿಯಲ್ಲಿ ಸಂಪನ್ಮೂಲ ವ್ಯಕ್ತಿಗಳ ವಿವರಗಳನ್ನು ನಮೂದಿಸುವುದು ಕಡ್ಡಾಯ.

4. ಸಂಪರ್ಕ ತರಗತಿಗಳಿಗೆ ಹಾಜರಾಗುವ ಉದ್ಯೋಗಸ್ಥ ಅಭ್ಯರ್ಥಿಗಳು ಕಛೇರಿಯಲ್ಲಿ ನಿಯಮಾನುಸಾರ ರಜೆ ಪಡೆದು ಹಾಜರಾಗುವುದು ಕಡ್ಡಾಯ.

ನಿರ್ದೇಶಕರು
ನಿರ್ದೇಶಕರು,
ದೂರ ಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ – 577 451.

. . . ಮುಂಪುಟಕ್ಕೆ

ಗೆ :

1. ಎಂ.ಬಿ.ಎ. ಕೋರ್ಸ್ ನಡೆಸಲು ಅನುಮತಿ/ಅನುಮೋದನೆ ಪಡೆದ ಎಲ್ಲಾ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳಿಗೆ.
2. ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – **ಮಾಹಿತಿಗಾಗಿ**

ಪ್ರತಿ :

1. ಉಪಕುಲಸಚಿವರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಅಧೀಕ್ಷಕರು (1) ಮತ್ತು (2), ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಎಲ್ಲಾ ವಿಷಯ ನಿರ್ವಾಹಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4. ಸಂಪರ್ಕಾಧಿಕಾರಿಗಳು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5. ವಿಷಯ ನಿರ್ವಾಹಕರು, ಕಂಪ್ಯೂಟರ್ ವಿಭಾಗ, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6. ಕಛೇರಿ ಪ್ರತಿ.